ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/513/ಎಸಿಎಂ(2)/2017-18

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:10-07-2018.

**-::: ಸುತ್ತೋಲೆ :::-**

**ವಿಷಯ:** ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಕೋರ್ಸಿಗೆ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಸರ್ಕಾರದ ಆದೇಶಗಳ ಪ್ರಕಾರ ಪಾವತಿಸಬೇಕಾಗಿರುವ ಶುಲ್ಕಗಳ ವಿವರ.

**-00000-**

2018-19ನೇ ಸಾಲಿನಲ್ಲಿ ರಾಜ್ಯದ 22 **"ನೋಡಲ್ ಸೆಂಟರ್"** ಗಳಲ್ಲಿ ಆನ್‌ಲೈನ್ ಇಂಟರಾಕ್ಟೀವ್ ಕೌನ್ಸಲಿಂಗ್ ಮೂಲಕ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಸೀಟು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಈ ಕೆಳಕಂಡ ವರ್ಗಗಳ ಅಡಿಯಲ್ಲಿ ಸರ್ಕಾರಿ ಆದೇಶಗಳಂತೆ ಅವರುಗಳ ಕುಟುಂಬದ ವಾರ್ಷಿಕ ವರಮಾನ / ಆದಾಯ ಗಳಂತೆ ಬೋಧನಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಪಾವತಿಸಲು ಶುಲ್ಕ ವಿನಾಯಿತಿಗೆ ಅರ್ಹರಿರುತ್ತಾರೆ. ಪ್ರಯುಕ್ತ, ಸೀಟು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳಿಗೆ ಪ್ರವೇಶ ಸಮಯದಲ್ಲಿ ಈ ಕೆಳಕಂಡಂತೆ ಶುಲ್ಕಗಳನ್ನು ಮಾತ್ರ ಪಾವತಿಸಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ.

| ಕ್ರ ಸಂ. | ವರ್ಗ | ಪೋಷಕರ ವಾರ್ಷಿಕ ಆದಾಯ ಮಿತಿ | ಸರ್ಕಾರದ ಆದೇಶಗಳ ಪ್ರಕಾರ ಪಾವತಿಸಬೇಕಾಗಿರುವ ಶುಲ್ಕಗಳ ವಿವರ | | |
|---|---|---|---|---|---|
| | | | ಸರ್ಕಾರಿ ಪಾಲಿಟೆಕ್ನಿಕ್ ಕೋರ್ಸುಗಳಿಗೆ | ಅನುದಾನಿತ ಪಾಲಿಟೆಕ್ನಿಕ್ (ಅನುದಾನಿತ ಕೋರ್ಸುಗಳಿಗೆ) | ಖಾಸಗಿ / ಅನುದಾನಿತ ಪಾಲಿಟೆಕ್ನಿಕ್ (ಅನುದಾನರಹಿತ ಕೋರ್ಸುಗಳಿಗೆ) |
| 01. | **ಸಾಮಾನ್ಯ** | -- | ₹ 4,270/- | ₹ 6,948/- | ₹ 13,405/- |
| | | ಸರ್ಕಾರದ ಆದೇಶ ಸಂಖ್ಯೆ. ಇಡಿ 119 ಟಿಪಿಇ 2005, ದಿನಾಂಕ:18-10-2005 ಮತ್ತು ಸರ್ಕಾರದ ಆದೇಶ ಸಂಖ್ಯೆ. ಇಡಿ 10 ಟಿಪಿಇ 2012, ದಿನಾಂಕ:29-05-2012 ಹಾಗೂ ಇಡಿ 64 ಟಿಪಿಇ 2016, ದಿನಾಂಕ:21-07-2016 ರನ್ವಯ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ. | | | |
| 02. | **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ** | ₹ 2.50 ಲಕ್ಷದವರೆಗೆ | ₹ 430/- | ₹ 430/- | -- |
| | | ಸರ್ಕಾರದ ಆದೇಶ ಸಂ. ಸಕಇ 178 ಪಕವಿ 2015, ದಿ:31-12-2015ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖೆ ವೆಬ್‌ಸೈಟ್: www.sw.kar.nic.in ನಲ್ಲಿ ಅವಕಾಶ ಇರುತ್ತದೆ. | | | |
| | | ₹ 2.50 ದಿಂದ ₹ 10.00 ಲಕ್ಷದವರೆಗೆ | ₹ 2,535/- | ₹ 3,874/- | -- |
| | | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶುಲ್ಕ ಮಂಜೂರಾತಿಗೆ ಆಫ್‌ಲೈನ್ ಅರ್ಜಿ ಸಲ್ಲಿಕೆಗಾಗಿ ತಾಂತ್ರಿಕ ಶಿಕ್ಷಣ ಇಲಾಖೆ ವೆಬ್‌ಸೈಟ್ www.dte.kar.nic.in ನಲ್ಲಿ ಮಾಹಿತಿ ಪಡೆಯಬಹುದು. | | | |
| **ಹಿಂದುಳಿದ ವರ್ಗ:** (ಅಲ್ಪಸಂಖ್ಯಾತ ವರ್ಗ ಹೊರತುಪಡಿಸಿ) | | | | | |
| 03. | **ಪ್ರವರ್ಗ-1** | ₹ 2.50 ಲಕ್ಷದವರೆಗೆ | ₹ 960/- | ₹ 3,638/- | -- |
| | | ಸರ್ಕಾರದ ಆದೇಶ ಸಂ. ಹಿಂವಇ 397 ಬಿಎಂಎಸ್ 2013, ದಿ:05-09-2013 ಮತ್ತು ಸರ್ಕಾರದ ಆದೇಶ ಸಂ. ಹಿಂವಕ 589 ಬಿಎಂಎಸ್ 2013, ದಿನಾಂಕ:05-10-2013 ಹಾಗೂ ಸರ್ಕಾರದ ತಿದ್ದುಪಡಿ ಮತ್ತು ಸೇರ್ಪಡೆ ಆದೇಶ ಸಂ. ಹಿಂವಕ 589 ಬಿಎಂಎಸ್ 2013, ದಿನಾಂಕ:06-08-2014 ರಂತೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವೆಬ್‌ಸೈಟ್ ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವೆಬ್‌ಸೈಟ್: www.karepass.gov.in ನಲ್ಲಿ ಅವಕಾಶ ಇರುತ್ತದೆ. | | | |

| | | | | | |
|---|---|---|---|---|---|
| 04. | 2ಎ / 3ಎ / 3ಬಿ | ₹ 1.00 ಲಕ್ಷದವರೆಗೆ | ₹ 960/- | ₹ 3,638/- | -- |
| | | ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವೆಬ್‌ಸೈಟ್ ಶುಲ್ಕ ಮಂಜೂರಾತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವೆಬ್‌ಸೈಟ್: www.karepass.gov.in ನಲ್ಲಿ ಅವಕಾಶ ಇರುತ್ತದೆ. | | | |
| **ಅಲ್ಪಸಂಖ್ಯಾತ ವರ್ಗ:** (ಹಿಂದುಳಿದ ವರ್ಗ ಹೊರತುಪಡಿಸಿ) | | | | | |
| 05. | ಪ್ರವರ್ಗ2ಎ–ಬೌದ್ಧ ಸಮುದಾಯ<br>ಪ್ರವರ್ಗ2ಬಿ–ಮುಸ್ಲಿಂ ಸಮುದಾಯ<br>ಪ್ರವರ್ಗ3ಬಿ–ಕ್ರಿಶ್ಚಿಯನ್, ಜೈನ್, ಪಾರ್ಸಿ, ಸಿಖ್ ಸಮುದಾಯ | -- | ₹ 4,270/- | ₹ 6,948/- | ₹ 13,405/- |
| ಸರ್ಕಾರದ ಆದೇಶ ಸಂಖ್ಯೆ ಎಂಡಬ್ಲ್ಯೂಡಿ 400 ಎಂಐಎಸ್ 2014, ದಿನಾಂಕ 17.10.2014 & ಎಂಡಬ್ಲ್ಯೂಡಿ 400 ಎಂಐಎಸ್ 2011, ದಿನಾಂಕ: 02.08.2014ರಂತೆ ಅಭ್ಯರ್ಥಿಗಳ ಪೋಷಕರ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.1.00 ಲಕ್ಷದ ಮಿತಿಯೊಳಗಿದ್ದಲ್ಲಿ, ಅಂತಹ ಅಭ್ಯರ್ಥಿಗಳಿಗೆ ಪ್ರಥಮ/ದ್ವಿತೀಯ/ತೃತೀಯ ಡಿಪ್ಲೊಮೊ ಪ್ರವೇಶದ ಸಮಯದಲ್ಲಿ ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಇರುವಂತೆ ಶುಲ್ಕ ವಿನಾಯಿತಿ ಇರುವುದಿಲ್ಲ. ಆದ್ದರಿಂದ, ನಿಗಧಿಪಡಿಸಿದ ಪೂರ್ಣ ಪ್ರವೇಶ ಶುಲ್ಕವನ್ನು ಪಾವತಿಸಿ, ನಂತರ ಶುಲ್ಕ ಮರುಪಾವತಿಗಾಗಿ ಆನ್‌ಲೈನ್ ಮುಖಾಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.gokdom.kar.nic.in or ಭಾರತ ಸರ್ಕಾರದ National Scholorship Portal ನಲ್ಲಿ ಅರ್ಜಿ ಸಲ್ಲಿಸಿ, ಶುಲ್ಕ ಮರುಪಾವತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ₹ 3,000/- ಗಳಷ್ಟು ಮೊತ್ತದ ಶುಲ್ಕ ಮರುಪಾವತಿ ನೀಡಲು ಅವಕಾಶವಿದೆ. | | | | | |
| 06. | ಎಸ್.ಎನ್.ಕ್ಯೂ (SNQ) | ₹ 1.00 ಲಕ್ಷದಿಂದ ₹ 6.00 ಲಕ್ಷದವರೆಗೆ | ₹ 1,330/- | ₹ 1,330/- | ₹ 1,330/- |
| | | ಸರ್ಕಾರಿ ಆದೇಶ ಸಂ. ಇಡಿ 72 ಟಿಇಸಿ 2013, ಬೆಂಗಳೂರು, ದಿನಾಂಕ: 23ನೇ ಮೇ 2014 ರನ್ವಯ ಶುಲ್ಕವನ್ನು ಪಾವತಿ ಮಾಡಬೇಕಾಗಿರುತ್ತದೆ. | | | |

ಸರ್ಕಾರದ ಆದೇಶಗಳಲ್ಲಿನ ಸೂಚನೆಗಳ ಪ್ರಕಾರ ಸೀಟು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಂದ ಪ್ರವೇಶ ಸಮಯದಲ್ಲಿ ವಸೂಲಿ ಮಾಡತಕ್ಕದ್ದು. ಮೇಲ್ಕಂಡಂತೆ ಕೂಡಲೇ ಕ್ರಮಕೈಗೊಂಡು ಈ ಬಗ್ಗೆ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಹಾಗೂ ಪೋಷಕರುಗಳ ಗಮನಕ್ಕೆ ತರುವುದು.

ನಿರ್ದೇಶಕರು

**ಇವರಿಗೆ,**

*ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ – ಸೂಕ್ತ ಕ್ರಮಕ್ಕಾಗಿ ಹಾಗೂ ಅನುಸರಣೆಗಾಗಿ*

**ಪ್ರತಿ:–**

1. ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು.
2. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂ.ಶಿ.ನಿ, ಬೆಂಗಳೂರು.
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ.
4. ನಿರ್ದೇಶಕರ ಆಪ್ತಶಾಖೆಗೆ.
5. ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ. ಬೆಂಗಳೂರು – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಕಛೇರಿ ಪ್ರತಿ.